

ದೋಡಿತಾಲ್ ಸರೋವರದ ರಮಣೀಯ ನೋಟ

ಬೆಳಿಗ್ಗೆ ಬೇಗನೆ ಎದ್ದು 10 ಕಿ.ಮೀ. ದೂರದಲ್ಲಿರುವ ನಮ್ಮ ಮುಂದಿನ ಶಿಬಿರ ಮಾಂಝೀಯತ್ತ ಚಾರಣ ಮುಂದುವರಿಸಿದೆವು. ಬೆಬ್ರಾ ಮತ್ತು ಮಾಂಝೀ ನಡುವಣ ಚಾರಣದ ಅನುಭವವೇ ವಿಭಿನ್ನ. ಮೊದಲ 4 ಕಿ.ಮೀ. ಏರುದಾರಿಯಲ್ಲಿ ಸಾಗಲು ಕಷ್ಟವೆನಿಸಿತಾದರೂ ನಂತರದ ದಾರಿಯ ರಮಣೀಯ ಪ್ರಕೃತಿ ಮನಸೂರೆಗೊಂಡಿತ್ತು. ಪರ್ವತಗಳ ಎಡಬದಿಯಲ್ಲೇ ನಾವು ಸಾಗಬೇಕಿತ್ತು. ಸ್ವಲ್ಪ ಯಾಮಾರಿದರೂ ಹಾದಿಯ ಬಲಬದಿಯಲ್ಲಿರುವ ಪ್ರಪಾತದಲ್ಲಿ ಬೀಳುವ ಸಾಧ್ಯತೆಗಳಿದ್ದವು. ಮಾರ್ಗದರ್ಶಿಗಳು ನಮ್ಮನ್ನು ಆಗಾಗ್ಗೆ ಎಚ್ಚರಿಸುತ್ತಿದ್ದರು. ಮಾರ್ಗದುದ್ದಕ್ಕೂ ಅಲ್ಲಲ್ಲಿ ಕೆಂಪು ಹೂವುಗಳ ಗೊಂಚಲುಗಳಿಂದ ಕೂಡಿರುವ ರೋಡೋ ಡೆಂಡ್ರಾನ್ ಮರಗಳು ಆಕರ್ಷಿತವಾಗಿದ್ದವು. ಸ್ಥಳೀಯರು ಈ ಹೂವುಗಳನ್ನು 'ಬುರಾನ್ಸ್' (Buransh) ಎಂದು ಕರೆಯುತ್ತಾರೆ.

ನಾಲ್ಕು ಕಿ.ಮೀ. ದೂರ ಕ್ರಮಿಸಿದ ನಂತರ ನಮಗೆ ಪುಟ್ಟ ಗುಡಿಸಲು ಕಾಣಿಸಿತು. ಇಲ್ಲಿಯೂ ಜನವಸತಿಯಿದೆಯೇ ಎಂದು ಅಚ್ಚರಿಗೊಂಡೆವು. ಆದರೆ, ಅದು ಮನೆಯಾಗಿರದೆ ಪುಟ್ಟ ಹೋಟೆಲ್ ಆಗಿತ್ತು. ಬಿಸ್ಕೆಟ್, ಟೀ ಹಾಗೂ ನೂಡಲ್ಸ್ ಮಾತ್ರ ಅಲ್ಲಿ ಲಭ್ಯ.

ಸುಮಾರು ನಾಲ್ಕು ಗಂಟೆ ಹೊತ್ತಿಗೆ ಮಾಂಝೀ ತಲುಪಿದೆವು. ಹತ್ತು ಹನ್ನೆರಡು ಗುಡಿಸಲುಗಳಿರುವ ಕುಗ್ರಾಮ. ಕುರಿಗಾಹಿಗಳು ಕೇವಲ ಬೇಸಿಗೆ ಕಾಲದಲ್ಲಿ ಇಲ್ಲಿ ವಾಸಿಸುತ್ತಾರಂತೆ. ಬೆಬ್ರಾದಲ್ಲಿ ಪಕ್ಕಾ ಮನೆಯಲ್ಲಿ ಶಿಬಿರ ಏರ್ಪಡಿಸಿದ್ದರೆ ಇಲ್ಲಿ ಟೆಂಟ್‌ಗಳ ಶಿಬಿರ. ಚಳಿ ವಿಪರೀತವಾಗಿದ್ದರಿಂದ ಮಲಗಲು ಪ್ರತಿಯೊಬ್ಬರಿಗೂ **sleeping bag** ನೀಡಲಾಗಿತ್ತು. ಬೆಳಿಗ್ಗೆ ಬೇಗನೆದ್ದು ಸೂರ್ಯೋದಯ ಸ್ಪಷ್ಟವಾಗಿ ಕಾಣುವ ಪ್ರದೇಶಕ್ಕೆ ತೆರಳಿದೆವು. ಪರ್ವತಗಳ ನಡುವೆ ಉದಯಿಸುವ ಸೂರ್ಯನ ಕಿರಣಗಳು ನಮ್ಮನ್ನು ಸಮ್ಮೋಹನಗೊಳಿಸಿದವು. ಬಂಗಾರ ಬಣ್ಣದ ಸೂರ್ಯ ರಶ್ಮಿಯಲ್ಲಿ ಪ್ರಕೃತಿಯೆಲ್ಲವೂ ಬಂಗಾರ ಬಣ್ಣದಾಗಿತ್ತು. ಈ ಸೌಂದರ್ಯ ಕಣ್ತುಂಬಿಕೊಂಡು ಕೊನೆಯ ಶಿಬಿರವಾದ ದೋಡಿತಾಲ್‌ನತ್ತ ಚಾರಣ ಮುಂದುವರಿಸಿದೆವು.

ಹಿಮಾಲಯ ಪ್ರದೇಶದಲ್ಲಿ ಸಮುದ್ರ ಮಟ್ಟದಿಂದ ಎತ್ತರಕ್ಕೆ ಹೋಗುವಷ್ಟೂ ರೋಡೊ ಡೆಂಡ್ರಾನ್ ಮರಗಳ ಸಂಖ್ಯೆಯೂ ಅಧಿಕವಾಗುತ್ತವೆ. ಚಳಿಗಾಲದಲ್ಲಿ ಹಿಮಚ್ಛಾದಿತವಾಗಿರುವ ಪರ್ವತಗಳ ಇಳಿಜಾರು ಪ್ರದೇಶ, ಮೇ ತಿಂಗಳಲ್ಲಿ ಹಸಿರು ಹುಲ್ಲು ಮತ್ತು ಅನೇಕ ಪ್ರಭೇದಗಳ ಪುಟ್ಟ ಪುಟ್ಟ ಹೂಗಳಿಂದ ತುಂಬಿದ್ದು ಬೇರೊಂದು ಲೋಕವನ್ನೇ ಸೃಷ್ಟಿಸಿದ್ದವು.

ಮಾಂಝೀಯಿಂದ ಸುಮಾರು 5 ಕಿ.ಮೀ. ದೂರದಲ್ಲಿರುವ ದೋಡಿತಾಲ್ ಸರೋವರ 1.5 ಕಿ.ಮೀ. ಸುತ್ತಳತೆಯದ್ದಾಗಿದ್ದು, ಸಮುದ್ರ ಮಟ್ಟದಿಂದ 10860 ಅಡಿ ಎತ್ತರದಲ್ಲಿದೆ. ಸಂಜೆ 4 ಗಂಟೆಗೆ ದೋಡಿತಾಲ್ ತಲುಪಿದೆವು. ಅತಿ ಸುಂದರ ಪ್ರದೇಶ. ಎತ್ತ ನೋಡಿದರೂ ದೇವದಾರು, ಪೈನ್, ಓಕ್ ಮರಗಳಿಂದ ಆವೃತವಾಗಿರುವ ಪರ್ವತಗಳು! ಸರೋವರದ ನೀರು ಪಾರದರ್ಶಕವಾಗಿತ್ತು. ಸರೋವರದ ಸುತ್ತಲೂ ನಡೆದೆವು. ಪಕ್ಕದಲ್ಲಿಯೇ ಗಣೇಶನಿಗಾಗಿ ನಿರ್ಮಿಸಿದ ಪುಟ್ಟ ದೇಗುಲ. ನಮ್ಮ ತಂಡದ ಸದಸ್ಯರು ಕೊನೆಗೂ ಗಣೇಶನ ಜನ್ಮಸ್ಥಾನ ತಲುಪಿದೆವೆಂದು ಭಾವುಕರಾದರು.



ಗಣೇಶ ದೇವಾಲಯ

ಬೆಳಿಗ್ಗೆ 8.30ಕ್ಕೆ ದರ್ವಾ ಪಾಸ್‌ನತ್ತ ಹೊರಟೆವು. ಸಮುದ್ರ ಮಟ್ಟದಿಂದ 4150 ಮೀಟರ್ (13615 ಅಡಿ) ಎತ್ತರದಲ್ಲಿರುವ ದರ್ವಾ ಪಾಸ್ ತಲುಪಲು ಸುಮಾರು 5 ಕಿ.ಮೀ ಮತ್ತು ಇಳಿಯಲು 5 ಕಿ.ಮೀ. ಚಾರಣ ನಡೆಸಬೇಕು. ಏರು ಹಾದಿಯಾಗಿರುವುದರಿಂದ 3–4 ಗಂಟೆಗಳ ಸಮಯ ತಗುಲುತ್ತದೆ. ದೋಡಿತಾಲ್ ಸರೋವರದ ಮತ್ತೊಂದು ಮಗ್ಗುಲಲ್ಲಿರುವ ಕಣಿವೆ ಮೂಲಕ ನಮ್ಮ ಚಾರಣ ಪ್ರಾರಂಭಿಸಿದೆವು. ಪ್ರಾರಂಭದಲ್ಲಿ ಅಷ್ಟೇನೂ ಕಷ್ಟವೆನಿಸಲಿಲ್ಲ. ಎತ್ತರಕ್ಕೆ ಹೋಗುತ್ತಿದ್ದಂತೆ ಆಮ್ಲಜನಕದ ಕೊರತೆಯಿಂದ ಎಲ್ಲರಲ್ಲೂ ದಣಿವು ಕಾಣಿಸಿಕೊಂಡಿತು. ವಿಶ್ರಮಿಸಿ ಚಾರಣ ಮುಂದುವರಿಸಿದೆವು.

ಸುಮಾರು 12 ಗಂಟೆ ಹೊತ್ತಿಗೆ ದರ್ವಾ ಪಾಸ್ ತಲುಪಿದೆವು. ಎತ್ತ ನೋಡಿದರೂ ಹಿಮದಿಂದ ಆವೃತ್ತವಾಗಿರುವ ಶಿಖರಗಳು ನಮ್ಮನ್ನು ಮೂಕವಿಸ್ಮಿತರನ್ನಾಗಿಸಿದ್ದವು. ಪ್ರಮುಖ ಶಿಖರಗಳಾದ ಗಂಗೋತ್ರಿ ಶಿಖರಗಳ ಸಮೂಹ; ಬಂದರ್ ಪೂಂಚ್, ಸ್ವರ್ಗ ರೋಹಿಣಿ, ದ್ರೌಪದಿ ಕಾ ದಂಡ್ ಮೊದಲಾದ ಪ್ರಮುಖ ಪರ್ವತಗಳ ಹಿಮಚ್ಛಾದಿತ ಶಿಖರಗಳನ್ನು ವೀಕ್ಷಿಸಿದೆವು. ಹಿಮದಲ್ಲಿ ನಡೆದಾಡುತ್ತಾ ಜಾರುತ್ತಾ ಹಿಮವನ್ನು ಉಂಡೆ ಮಾಡಿ ಎರಚಾಡುತ್ತಾ ಸಂತೋಷಪಟ್ಟೆವು.

ಶಿಬಿರ ತಲುಪಿದಾಗ ಸಂಜೆ 4 ಗಂಟೆ. ಅಂದು ರಾತ್ರಿ ದೋಡಿತಾಲ್ ಶಿಬಿರದಲ್ಲೇ ತಂಗಿ, ಮಾರನೇ ದಿನ ಮಾಂಝೀ, ಬೆಬ್ರಾ ಗ್ರಾಮಗಳ ಮಾರ್ಗವಾಗಿ ಒಟ್ಟು 18 ಕಿ.ಮೀ. ಚಾರಣ ನಡೆಸಿ ಅಗೋಡ ಗ್ರಾಮ ತಲುಪಿದೆವು.



ದರ್ವಾ ಪಾಸ್ ಮಾರ್ಗದಲ್ಲಿ...

ಪ್ರತಿಕ್ರಿಯಿಸಿ: **feedback@sudha.co.in**